ಹುಬ್ಬಳ್ಳಿ ನಗರದಲ್ಲಿರುವ ವಿಭಾಗೀಯ ಕಾರ್ಯಾಗಾರ ಮುಚ್ಚುವುದು.

2057(2647)

ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯಾತ್ ಖಾನ್ (ಹುಬ್ಬಳ್ಳಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿರುವ ಸಾರಿಗೆ ವಿಭಾಗೀಯ ಕಾರ್ಯಾಗಾರ ಮುಚ್ಚುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಕಾರ್ಯಾಗಾರ ಮುಚ್ಚುವಂತಹ ಅವಶ್ಯಕತೆಗೆ ಕಾರಣವೇನು?

ಇ) ಸದರಿ ಕಾರ್ಯಾಗಾರದಲ್ಲಿ ಎಷ್ಟು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಈ ಕಾರ್ಯಾಗಾರವನ್ನು ಮುಚ್ಚುವ ಪ್ರಸ್ತಾವನೆ ಇಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸ್ತುತ ಕಾರ್ಯಾಗಾರದಲ್ಲಿ ಈ ಕೆಳಗಿನಂತೆ ಅಧಿಕಾರಿ: ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

ಅಧಿಕಾರಿಗಳು	೧೦
ಆಡಳಿತ ಸಿಬ್ಬಂದಿ	೧೦೬
ತಾಂತ್ರಿಕ	೫೨೭
ಒಟ್ಟು	**೬೪೩**

ಬೆಂಗಳೂರು ದಕ್ಷಿಣ ತಾಲ್ಲೂಕು ಕೆ.ಆರ್.ಪುರಂ ಹೋಬಳಿ ಬೈರಸಂದ್ರ ಗ್ರಾಮದ ಸರ್ವೆನಂ.೫೦:೨ರಲ್ಲಿ ಸರ್ಕಾರಿ ಜಮೀನಿನ ಅಕ್ರಮ ಖಾತೆ ಮಾಡಿರುವುದು.

೨೦೬೦(೨೫೧೨)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ(ಅಪರ) ತಾಲ್ಲೂಕು ಕೆ.ಆರ್.ಪುರ ಹೋಬಳಿ, ಭೈರಸಂದ್ರ ಗ್ರಾಮದ ಸರ್ವೆ ನಂಬರ್ ೫೦:೨ರಲ್ಲಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿ ಖಾಸಗಿಯವರಿಗೆ ನೀಡಿರುವುದು ನಿಜವೇ; (ಏವರ ನೀಡುವುದು)

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನನ್ನು ಈ ರೀತಿ ಪರಭಾರೆ ಮಾಡಲಾಗಿದೆ?

ಇ) ಈ ಜಮೀನಿನಲ್ಲಿ ಅಪಾರ್ಟ್‌ಮೆಂಟ್ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಈ ರೀತಿ ಅಪಾರ್ಟ್‌ಮೆಂಟ್ ಕಟ್ಟುತ್ತಿರುವವರ ಅಕ್ರಮ ದಾಖಲೆಗಳನ್ನು ರದ್ದುಗೊಳಿಸಿ ಈ ಸ್ವತ್ತನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಬಹುದಲ್ಲವೇ?

ಉ) ಈ ರೀತಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಖಾಸಗಿಯವರಿಗೆ ದಾಖಲೆಗಳಲ್ಲಿ ನಮೂದು ಮಾಡಿ ಸರ್ಕಾರಕ್ಕೆ ವಂಚಿಸಿರುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಭೈರಸಂದ್ರ ಗ್ರಾಮದ ಸರ್ವೆ ನಂ:50:2ರಲ್ಲಿ ಶ್ರೀಮತಿ.ಸೊಣ್ಣಮ್ಮನವರಿಗೆ 1.38 ಎಕರೆ ಅಕ್ರಮ ಖಾತೆಯಾಗಿದೆ.

ಆ) 0.38 ಎಕರೆ.

ಇ) ಹೌದು

ಈ) ಹೌದು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಉ) ಆರ್ ಆರ್ ಶಿರಸ್ತೇದಾರ್ ಹಾಗೂ ಗ್ರಾಮ ಲೆಕ್ಕಿಗರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯಲ್ಲಿ ಕಾನೂನು ಬಾಹಿರ ಸರ್ಕಾರಿ ಜಮೀನಿನ ಒತ್ತುವರಿ.